ಬೆವಿಕಂ
BESCOM
# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ಸಂಖ್ಯೆ:- ಮುಪ್ರವ್ಯ(ಕಾ)/ಉಪ್ರವ್ಯ-3/ಸಪ್ರವ್ಯ-1/ಬಿಸಿ-07/ಎಫ್-383/19-20/ 845-23
ಲಗತ್ತು:

ನಿಗಮ ಕಾರ್ಯಾಲಯ,
ಕೆ.ಆರ್.ವೃತ್ತ,
ಬೆಂಗಳೂರು.
ದಿನಾಂಕ:- 1 JUN 2019

ವಿಷಯ: ದಿನಾಂಕ: 26.12.2018 ರವರೆಗೂ ವಿದ್ಯುತ್ ಮಂಜೂರಾತಿಯಾಗಿರುವ ಮತ್ತು ಠೇವಣಿ ಶುಲ್ಕ ಪಾವತಿ ಮಾಡಿರುವ ಅರ್ಜಿಗಳಿಗೆ ಹೆಚ್.ಟಿ ಪ್ರವರ್ಗದಡಿ ವಿದ್ಯುತ್ ಸಂಪರ್ಕ ಕಲ್ಪಿಸುವ ಬಗ್ಗೆ.

ಉಲ್ಲೇಖ:
1. ಅರೆ ಸರ್ಕಾರಿ ಪತ್ರ ಸಂಖ್ಯೆ: **BESCOM//MD/PS/BC-1/2019-20/27 dated: 16.05.2019.**
2. ಅರೆ ಸರ್ಕಾರಿ ಪತ್ರ ಸಂಖ್ಯೆ: **BESCOM//MD/PS/BC-1/2019-20/32 dated: 23.05.2019.**
3. ಕರ್ನಾಟಕ ರಾಜ್ಯ ಪತ್ರ ಪ್ರಕಟಣೆ ದಿನಾಂಕ: 27.12.2018.
4. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗದ **"Conditions of supply"** ನ 7ನೇ ತಿದ್ದುಪಡಿ ದಿನಾಂಕ: 26.12.2018.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆರವರ ಪತ್ರ ಸಂಖ್ಯೆ: **Energy/85/VSC/2019-EMC-Energy Secretariat dated: 31.05.2019.**

**<u>ಪೀಠಿಕೆ:-</u>**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(3)ರ ತಿದ್ದುಪಡಿ ಆದೇಶ ದಿನಾಂಕ: 26..12.2018 ರಂತೆ "Conditions of supply" ನ ನಿಯಮಾವಳಿ 8.11 ಕ್ಕೆ ಅನ್ವಯವಾಗುವಂತೆ (ಹೆಚ್.ಟಿ) ವಿದ್ಯುತ್ ಸಂಪರ್ಕ ಪಡೆಯ ಬಯಸುವ ಅರ್ಜಿದಾರರು Occupancy Certificate ಮತ್ತು Test and Commissioning Certificate ಗಳ ಪ್ರತಿಗಳನ್ನು ಒದಗಿಸುವುದು ಕಡ್ಡಾಯವಾಗಿರುತ್ತದೆ ಹಾಗೂ ಸದರಿ ಆದೇಶವು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಯಾಗಬೇಕಾಗಿರುತ್ತದೆ.

ಆದರೆ, ದಿನಾಂಕ: 26.12.2018 ರವರೆಗೆ ನೊಂದಾವಣೆಗೊಂಡ ಮತ್ತು ವಿದ್ಯುತ್ ಮಂಜೂರಾತಿ ಪಡೆದ ಸುಮಾರು 1400 ಅರ್ಜಿಗಳು ವಿದ್ಯುತ್ ಸಂಪರ್ಕಕ್ಕಾಗಿ ಬಾಕಿ ಇದ್ದು, ಈ ಪೈಕಿ 541 ಸಂಖ್ಯೆಯ ಅರ್ಜಿಗಳು Occupancy Certificate ಅನ್ನು ಸಲ್ಲಿಸುವ ಕಾರಣದಿಂದ ಬಾಕಿ ಇರುತ್ತವೆ. ಬಾಕಿ ಇರುವ 541 ಅರ್ಜಿಗಳಿಗೆ ಮಂಜೂರಾತಿ ನೀಡುವ ಸಂದರ್ಭದಲ್ಲಿ Occupancy Certificate ಅನ್ನು ಸಲ್ಲಿಸಬೇಕೆಂದು ತಿಳಿಸಿಲ್ಲದ ಕಾರಣ ಹಾಗೂ ಸದರಿ ಅರ್ಜಿದಾರರು ವಿದ್ಯುತ್ ಸಂಪರ್ಕಕ್ಕೆ ಅಗತ್ಯವಿರುವ ಮೂಲಸೌಕರ್ಯ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದರಿಂದ, ದಿನಾಂಕ: 26.12.2018 ರವರೆಗೆ, ಸದರಿ ಬಾಕಿ ಉಳಿದಿರುವ ಅರ್ಜಿದಾರರಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕುರಿತು ಸೂಕ್ತ ನಿರ್ದೇಶನವನ್ನು ನೀಡುವಂತೆ ಇಂಧನ ಇಲಾಖೆಯನ್ನು ಉಲ್ಲೇಖ(1) ಮತ್ತು (2)ರಲ್ಲಿ ತಿಳಿಸಿರುವ ಪತ್ರಗಳಲ್ಲಿ ಕೋರಲಾಗಿತ್ತು. ಈ ಸಂಬಂಧ, ಉಲ್ಲೇಖ(5)ರ ಪತ್ರದಲ್ಲಿ ಇಂಧನ ಇಲಾಖೆಯಿಂದ ಬೆವಿಕಂಗೆ ನಿರ್ದೇಶನವನ್ನು ನೀಡಲಾಗಿರುತ್ತದೆ.

**ಈ ಹಿನ್ನೆಲೆಯಲ್ಲಿ, ಕೆಳಗಿನಂತೆ ಸುತ್ತೋಲೆ ಹೊರಡಿಸಲಾಗಿದೆ.**

Scanned by CamScanner

ಸುತ್ತೋಲೆ

**ಆದೇಶ ಸಂಖ್ಯೆ:- ಮುಪ್ರವ್ಯ(ಕಾ)/ಉಪ್ರವ್ಯ-3/ಸಪ್ರವ್ಯ-1/ಬಿಸಿ-07/ಎಫ್-383/19-20/ಸಿವೈಎಸ್-23**
**ದಿನಾಂಕ:** 21 JUN 2019

ಬೆವಿಕಂನಲ್ಲಿ, ದಿನಾಂಕ: 26.12.2018 ರವರೆಗೆ (as on and up to 26.12.2018) ವಿದ್ಯುತ್ ಮಂಜೂರಾತಿ ಪಡೆದ ಮತ್ತು ಠೇವಣಿ ಶುಲ್ಕಗಳನ್ನು ಪಾವತಿಸಿದ ಹೆಚ್.ಟಿ ಪ್ರವರ್ಗದ ಅರ್ಜಿಗಳನ್ನು ಮಾತ್ರ ಪರಿಗಣಿಸಿ, Occupancy Certificate ಕಡ್ಡಾಯ ಪಡಿಸದೇ ವಿದ್ಯುತ್ ಸಂಪರ್ಕ ಒದಗಿಸಲು ನಿಯಮಾನುಸಾರ ಸೂಕ್ತ ಕ್ರಮ ವಹಿಸುವಂತೆ ಸೂಚಿಸಲಾಗಿದೆ.

ಮುಖ್ಯ ಪ್ರಧಾನ ವ್ಯವಸ್ಥಾಪಕರು(ವಿ)
**ಕಾರ್ಯಾಚರಣೆ, ಬೆವಿಕಂ**

ಪ್ರತಿಗಳು:-

1. ಕಂಪನಿ ಕಾರ್ಯದರ್ಶಿಗಳು, ನಿಗಮ ಕಾರ್ಯಾಲಯ, ಬೆವಿಕಂ, ಬೆಂಗಳೂರುರವರ ಮಾಹಿತಿಗಾಗಿ.
2. ಸರ್ಕಾರದ ಅಧೀನ ಕಾರ್ಯದರ್ಶಿ, ಇಂಧನ ಇಲಾಖೆ, 2ನೇ ಮಹಡಿ, ವಿಕಾಸಸೌಧ, ಬೆಂಗಳೂರುರವರ ಮಾಹಿತಿಗಾಗಿ.
3. ಎಲ್ಲಾ ಮುಖ್ಯ ಪ್ರಧಾನ ವ್ಯವಸ್ಥಾಪಕರು, ಕಂಪನಿ ಕಾರ್ಯಾಲಯ, ಬೆವಿಕಂ, ಬೆಂಗಳೂರು.
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ವಾಣಿಜ್ಯ, ಕಾರ್ಯ ಮತ್ತು ಪಾಲನ ವಲಯ, ಬೆವಿಕಂ.
5. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ವಾಣಿಜ್ಯ, ಕಾರ್ಯ ಮತ್ತು ಪಾಲನ ವೃತ್ತ ಬೆವಿಕಂ.
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಾಣಿಜ್ಯ, ಕಾರ್ಯ ಮತ್ತು ಪಾಲನ ವಿಭಾಗ, ಬೆವಿಕಂ.
7. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಾಣಿಜ್ಯ, ಕಾರ್ಯ ಮತ್ತು ಪಾಲನ ಉಪವಿಭಾಗ, ಬೆವಿಕಂ.
8. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಬೆವಿಕಂ.
9. ಪೊಲೀಸ್ ಅಧೀಕ್ಷಕರು, ಜಾಗೃತದಳ, ಕಂಪನಿ ಕಾರ್ಯಾಲಯ, ಬೆವಿಕಂ, ಬೆಂಗಳೂರು.
10. ಎಲ್ಲಾ ಅಧಿಕಾರಿಗಳು, ಕಂಪನಿ ಕಾರ್ಯಾಲಯ, ಬೆವಿಕಂ.
11. ಎಲ್ಲಾ ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ವಾಣಿಜ್ಯ, ಕಾರ್ಯ ಮತ್ತು ಪಾಲನ, ಬೆವಿಕಂ.
12. ವ್ಯ.ನಿ/ನಿ(ತಾಂ) ಕಂಪನಿ ಕಾರ್ಯಾಲಯ ಬೆವಿಕಂ, ಇವರ ಆಪ್ತ ಕಾರ್ಯದರ್ಶಿಗಳಿಗೆ.
13. ಕಛೇರಿ ಪ್ರತಿ / ಮುಖ್ಯ ಕಡತ.

Scanned by CamScanner